**ಅ. ದಾ. ಸಂ. : 147/2014**
**ಪಿ . ಡಬ್ಲ್ಯೂ : 01**

**ದಿನಾಂಕ : 19-06-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು :- ವಾದಿಯ ಪರ ಶ್ರೀ.ಎ. ಎಸ್ .ಎಸ್ , ವಕೀಲರಿಂದ :-**

ದಿ.19-04-2023 ರಂದು ಪಾಟೀ ಸವಾಲಿನ 14 ನೇ ಪುಟದಲ್ಲಿ ಕಣ್ಣು ತಪ್ಪಿನಿಂದ 1 ನೇ ಪ್ರತಿವಾದಿಯ ಬದಲು 1 ನೇ ವಾದಿ ಎಂದು ಬರೆಯಲಾಗಿದೆ ಎಂದು ವಾದಿ ಪರ ವಕೀಲರು ಹೇಳಿರುತ್ತಾರೆ. ಸದರಿ ಪುಟಗಳನ್ನು ಪರಿಶೀಲಿಸಿ ನೋಡಿದಾಗ, ಕಣ್ಣು ತಪ್ಪಿನಿಂದ ತಪ್ಪಾಗಿರುವುದು ಕಂಡುಬಂದಿರುತ್ತದೆ. ಆದ್ದರಿಂದ 1 ನೇ ವಾದಿ ಎಂದು ನಮುದಾಗಿರುವ ಜಾಗದಲ್ಲಿ 1 ನೇ ಪ್ರತಿವಾದಿ ಎಂದು ತಿದ್ದುಪಡಿ ಮಾಡಲಾಗಿರುತ್ತದೆ.

3. ನಾನು ನನ್ನ ಪ್ರಮಾಣಪತ್ರದಲ್ಲಿ ಮತ್ತು ಈ ಹಿಂದೆ ಪಾಟೀ ಸವಾಲಿನಲ್ಲಿ 1 ನೇ ಪ್ರತಿವಾದಿಗೆ ಹೃದಯ ಸಂಬಂಧಿ ಕಾಯಿಲೆ, ಬಿ. ಪಿ ಮತ್ತು ಸಕ್ಕರೆ ಕಾಯಿಲೆ ಇದೆ ಎಂದು ಹೇಳಿರುತ್ತೇನೆ. ಆದರೆ ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಸಾಕ್ಷಿ ಮುಂದುವರೆದು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಖಾಸಗಿ ವಲಯದಲ್ಲಿ ಕೆಲಸ ಮಾಡುವ ಕಾರಣದಿಂದ, ಅವರಿಂದಲೂ ಸಹ ವಿಶೇಷ ಅಧಿಕಾರ ಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಆದರೆ ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

4. 4 ನೇ ಪ್ರತಿವಾದಿ ಅವರ ಗಂಡನ ಮನೆಯಲ್ಲಿ ವಾಸವಿರುವ ಕಾರಣ ಅವರಿಂದಲೂ ಸಹ ವಿಶೇಷ ಅಧಿಕಾರ ಪತ್ರವನ್ನು ಪಡೆದುಕೊಂಡಿರುತ್ತೇನೆ, ಆದರೆ

ಅವರು ಗಂಡನ ಮನೆಯಲ್ಲಿ ವಾಸವಿರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಿಪಿ-1 ಕ್ಕೆ ನನ್ನ ತಂದೆ ಮತ್ತು ತಾಯಿಯವರು ಪಕ್ಷಕಾರರಾಗಿರುತ್ತಾರೆ, ಆದರೆ ನನ್ನ ತಾಯಿಯನ್ನು ನ್ಯಾಯಾಲಯಕ್ಕೆ ಕರೆಸಿದರೆ ಸತ್ಯಾಂಶ ಹೊರಬೀಳುತ್ತದೆ ಎಂಬ ಉದ್ದೇಶದಿಂದ ನಾನು ನಿಡಿ-1 ರಂತೆ ವಿಶೇಷ ಅಧಿಕಾರ ಪತ್ರವನ್ನು ಪಡೆದುಕೊಂಡು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿರುವ ವಿಷಯವು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

5. ನಾನು ಈ ಹಿಂದೆ ಪಾಟೀ ಸವಾಲಿನಲ್ಲಿ ವಾದಿಯು ನೀಡಿರುವ ನೋಟಿಸ್ ಗೆ ಪ್ರತ್ಯುತ್ತರವನ್ನು ನೀಡಿರುತ್ತೇನೆ ಎಂದು ಹೇಳಿರುತ್ತೇನೆ ಮತ್ತು ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ?ನಾನು ನಿಪಿ-10 ರಲ್ಲಿ ವಾದಗೀ ಗುಡ್‌ವಿಲ್ ಆಧಾರದ ಮೇಲೆ ದಾವೆ ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತೇನೆ ಎಂದು ಹೇಳಿರುತ್ತೇನೆ , ಸದರಿ ವಿಷಯದ ಬಗ್ಗೆ ನಾನೇ ಖುದ್ದಾಗಿ ನನ್ನ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಯಾವ ದಾಖಲಾತಿಯ ಆಧಾರದ ಮೇಲೆ ಗುಡ್ ವಿಲ್ ಎಂದು ಬರೆಸಿದ್ದೀರಾ ಎಂದರೆ ಗುಡ್‌ವಿಲ್ ಎಂದರೆ ಮಾನವೀಯತೆ ದೃಷ್ಟಿ ಎಂದು ನಾನು ತಿಳಿದುಕೊಂಡಿರುತ್ತೇನೆ. ನಾನು ನಿಪಿ-10 ರಲ್ಲಿ ಗುಡ್ ವಿಲ್, ಬಾಡಿಗೆ ಅಪೇಕ್ಷಿಸದೇ ಮನೆಯನ್ನು ನೀಡಿದ್ದೇನೆ ಎಂದು ಬರೆದಿರುತ್ತೇನೆ , ಇದಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆಗಳನ್ನು ವಾದಿಯಿಂದ ಪಡೆದುಕೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು ವಾದಿಯು ಸಂಬಂಧಿಕರಾಗಿದ್ದರಿಂದ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆ ತಾಯಿಗೆ ಮಾನವೀಯತೆ ದೃಷ್ಟಿಯಿಂದ ದಾವಾಆಸ್ತಿಯನ್ನು ಬಿಟ್ಟುಕೊಡುವಾಗ ದಾಖಲೆಗಳನ್ನು ಬರೆಸಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ನಾನು ನನ್ನ ವಕೀಲರಿಗೆ ಸುಳ್ಳು ಮಾಹಿತಿಯನ್ನು ನೀಡಿ ನಿಪಿ-10 ನ್ನು ಬರೆಸಿದ್ದೇನೆ ಎಂದರೆ

ಸರಿಯಲ್ಲ. ನನಗೆ ನಿಪಿ-1 ಮತ್ತು ಸದರಿ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಂತೆ ವಾದಿಯವರಿಗೆ ಕ್ರಯಪತ್ರ ಮಾಡಿಕೊಡಬೇಕು ಎಂಬ ಉದ್ದೇಶದಿಂದ ಮತ್ತು ಮುಂಗಡ ಹಣವನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರವನ್ನು ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ನ್ನು ಮಾಡಲಾದ ದಿನದಿಂದಲೂ ಸಹ ಇಲ್ಲಿಯವರೆಗೂ ವಾದಿಯೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ವಾದಿಯೂ ಸ್ವಾಧೀನಲ್ಲಿ ಇರುವುದು ಸತ್ಯ ಆದರೆ ಯಾವುದೇ ಕರಾರುಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ವಾದಿಗೆ ಗುಡ್ ವಿಲ್, ಸಂಬಂಧಿಕರು ಮತ್ತು ಮಾನವೀಯತೆಯ ದೃಷಿಯಿಂದ ಸ್ವಾಧೀನವನ್ನು ಬಿಟ್ಟುಕೊಟ್ಟಿಲ್ಲ ಮತ್ತು ನಿಪಿ-1 ರಂತೆ ಸ್ವಾಧೀನ ಬಿಟ್ಟುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಿಪಿ-1 ರ ಆಧಾರದ ಮೇಲೆ ಸ್ವಾಧೀನವನ್ನು ಬಿಟ್ಟುಕೊಟ್ಟಿದ್ದರೂ ಸಹ ಮರಳಿ ಸ್ವಾಧೇನವನ್ನು ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ:**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ, ಮಾಗಡಿ.**